S C.R.P.67

Form No.4
(Criminal)
Deposition
Sheets
(R.P.No.57)

**5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ**

# ಸ್ಪೆಷಲ್ ಕೇಸ್ ನಂಬರ್ಃ 208/2019

**ಚಾ.ಸಾ.-01 ಫ್ರಾ.ಸಾ.-03**

| | |
|---|---|
| **ಸಾಕ್ಷಿದಾರರ ಹೆಸರು** | **ನಾಗರತ್ನಮ್ಮ** |
| **ಗಂಡನ ಹೆಸರು** | **ಶಿವಲಿಂಗಯ್ಯ** |
| **ವಯಸ್ಸು** | **63 ವರ್ಷಗಳು** |
| **ಉದ್ಯೋಗ** | **ಗೃಹಿಣಿ** |
| **ವಾಸ** | **ಕಾವೇರಿನಗರ, ಮಂಡ್ಯ** |

**ದಿನಾಂಕಃ 23.09.2025 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ನಾನು ಪರಿಶಿಷ್ಟ ಜಾತಿಯ ಆದಿ ಕರ್ನಾಟಕ ಜನಾಂಗಕ್ಕೆ ಸೇರಿದವಳು. ನನಗೆ ಚಾಸಾ-2, 3, 4, 5, 6, 7 ರವರ ಪರಿಚಯ ಇಲ್ಲ.

2) ಈ ದಿನ ನ್ಯಾಯಾಲಯದ ಮುಂದಿರುವ 1ನೇ ಆರೋಪಿ ಮತ್ತು ಅವರ ಹೆಂಡತಿ 2ನೇ ಆರೋಪಿಯ ಪರಿಚಯ ನನಗೆ ಇದೆ. (Witness identified accused No.1 in the dock and learned Counsel for Accused submits that there is no identity dispute with respect to accused No.2). ಆರೋಪಿ -1 ಮತ್ತು 2 ರವರು ಒಕ್ಕಲಿಗ ಜಾತಿಗೆ ಸೇರಿದವರು.

3) ನನ್ನ ಗಂಡ ಶಿವಲಿಂಗಯ್ಯ ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ಅವರು ಸುಮಾರು 13 ವರ್ಷದ ಹಿಂದೆ ನಿವೃತ್ತಿ ಹೊಂದಿರುತ್ತಾರೆ. ಪೋಲೀಸರು ಎಲ್ಲರು ಸೇರಿ ಹಣವನ್ನು ಹಾಕಿ ಜವರೇಗೌಡರ ಹೆಸರಿಗೆ ಜಮೀನನ್ನು ಖರೀದಿಸಿದ್ದರು. ಒಟ್ಟಾಗಿ ಎಷ್ಟು ಜಮೀನು ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಂತರ ಎರಡು ಕಾಲು ಗುಂಟೆನನ್ನ ಹೆಸರಿಗೆ 1995 ರಲ್ಲಿ ನೊಂದಣಿ ಮಾಡಿಸಿಕೊಂಡಿರುತ್ತೇವೆ. ನಂತರ ಅದು

ನನ್ನ ಅನುಭವದಲ್ಲಿ ಇದೆ. ಸದರಿ ಜಮೀನಿನಲ್ಲಿ ಅಳತೆ ಮಾಡಿಸಿ ಸುತ್ತಾ ಕಲ್ಲನ್ನು ಹಾಕಿಸಿ ನನ್ನ ಹೆಸರಿನ ನಾಮಫಲಕವನ್ನು ಇಟ್ಟಿರುತ್ತೇವೆ. ಜನವರಿ 13ನೆ ತಾರೀಖು 1ಮತ್ತು 2ನೇ ಆರೋಪಿತರು ಮತ್ತು ಮಕ್ಕಳು ಅಳಿಯಂದಿರು ಸೇರಿ ಕಲ್ಲನ್ನು ಹೊಡೆದು ಹಾಕಿದರು ಯಾವ ವರ್ಷ ಎಂದು ನನಗೆ ನೆನಪಿಲ್ಲ. ಹೊಡೆದು ಹಾಕಿರುವ ವಿಷಯವನ್ನು ನಾಗರಾಜು ಎನ್ನುವವರು ನಮಗೆ ತಿಳಿಸಿದರು. ನಂತರ ನಾನು ಜಮೀನಿಗೆ ಹೋಗಿ ನೋಡಿರುತ್ತೇನೆ. ಆ ಸಮಯ ಜಮೀನಿನಲ್ಲಿ ಇದ್ದ ಕಲ್ಲು ಕಿತ್ತು ಹಾಕಿದ್ದರು ನಾಮಫಲಕ ಹೊಡೆದು ಹಾಕಿದ್ದರು. ನಂತರ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಸದರಿ ದೂರನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ–2** ಎಂದು ಗುರುತಿಸಲಾಗಿದೆ, ಅದರಲ್ಲಿ ಸಾಕ್ಷಿಯು ಗುರುತಿಸಿರುವ ಅವರ ಸಹಿಯನ್ನು **ನಿಪಿ–2(ಎ)** ಎಂದು ಗುರುತಿಸಲಾಗಿದೆ. ಸದರಿ ಜಮೀನಿಗೆ ಸಂಬಂದಪಟ್ಟಂತೆ ದಾಖಲೆಯನ್ನುಸಹಾ ಪೋಲೀಸರಿಗೆ ನೀಡಿರುತ್ತೇನೆ. ಸದರಿ ಜಮೀನಿಗೆ ಸಂಬಂದಪಟ್ಟ ಕ್ರಯ ಪತ್ರದ ನಕಲನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ–3** ಎಂದು ಗುರುತಿಸಲಾಗಿದೆ. ಸದರಿ ಜಮೀನಿಗೆ ಸಂಬಂದಪಟ್ಟ ಆರ್.ಟಿ.ಸಿ ನಕಲನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ–4** ಎಂದು ಗುರುತಿಸಲಾಗಿದೆ. ಸದರಿ ಜಮೀನಿಗೆ ಸಂಬಂದಪಟ್ಟ ಮ್ಯೂಟೇಷನ್ ಪ್ರತಿಯ ನಕಲನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ–5** ಎಂದು ಗುರುತಿಸಲಾಗಿದೆ. ದೂರನ್ನು ನೀಡಿದ ನಂತರ ಪೋಲೀಸರು ಸ್ಥಳಕ್ಕೆ ಬಂದಿದ್ದರು. ಆಗ ನಾನು ಮತ್ತು ನನ್ನ ಗಂಡ ಸ್ಥಳಕ್ಕೆ ಹೋಗಿದ್ದೆವು. ಪೋಲೀಸರು ಮಹಜರ್ ಮಾಡಿದರು. ನನಗೆ ಈಗ ತೋರಿಸಿದ ಮಹಜರಿನಲ್ಲಿ ಇರುವ ಸಹಿ ನನ್ನದು. ಸದರಿ ಮಹಜರ್ ಅನ್ನು **ನಿಪಿ.6** ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ.6(ಎ)** ಎಂದು ಗುರುತಿಸಲಾಗಿದೆ. ಮಹಜರ್ ಸಮಯ ಸಾಕ್ಷಿಯಾಡಿ ಬಂದವರ ಹೆಸರು ನನಗೆ ಮರೆತುಹೋಗಿದೆ.

4) ಅಲ್ಲಿ ಹೊಡೆದು ಹಾಕಿದ್ದ ನಾಮಫಲಕದ ಕಾಂಕ್ರೀಟ್ ಚೂರನ್ನು ಪೋಲೀಸರು ವಶಪಡಿಸಿಕೊಂಡಿದ್ದರು. ಅದನ್ನು ಈಗ ನೋಡುತ್ತಿದ್ದು ಅದನ್ನು **ಎಂಒ–1** ಎಂದು ಗುರುತಿಸಲಾಗಿದೆ. ಸದರಿ ಮಹಜರ್ ಸಮಯ ಪೋಟೋಗಳನ್ನು ತೆಗೆದಿರುತ್ತಾರೆ. ಸದರಿ ಪೋಟೋಗಳ ಪ್ರಿಂಟ್ ಔಟನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ–7 ಮತ್ತು ನಿಪಿ–8** ಎಂದು ಗುರುತಿಸಲಾಗಿದೆ. ಆರೋಪಿತರು ಕಲ್ಲು ಹೊಡೆದು ಹಾಕಿದ್ದ ಕಾರಣ

ನಮಗೆ ನಷ್ಟ ಆಗಿರುತ್ತದೆ. ಆದರೆ ಎಷ್ಟು ಎಂದು ಹೇಳಲು ಈಗ ನನಗೆ ನೆನಪಿಲ್ಲ. ಈ ಬಗ್ಗೆ ತನಿಖಾಧಿಕಾರಿಗಳಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಪರಿಶೀಲಿಸಿ ಭಾರತ ಸಾಕ್ಷ್ಯ ಅಧಿನಿಯಮ ಕಲಂ 154ರ ಪ್ರಕಾರ ಅನುಮತಿ ಕೊಡಲಾಯಿತು.)**

**ಪಾಟೀಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

5) ನಿವೃತ್ತ ಪೋಲೀಸ್ ಸಿಬ್ಬಂದಿಗಳು 2ನೇ ಆರೋಪಿ ರಾಜಮ್ಮರವರ ಹೆಸರಿನಲ್ಲಿ ಒಟ್ಟಿಗೆ ಜಮೀನನ್ನು ಖರೀದಿಸಿರುತ್ತಾರೆ ಎಂದರೆ ಸರಿ ಸದರಿ ರಾಜಮ್ಮರವರಿಂದ ನನ್ನ ಹೆಸರಿಗೆ ಎರಡು ಕಾಲು ಗುಂಟೆ ಜಮೀನು ಖರೀದಿಸಿರುತ್ತೇನೆ ಎಂದರೆ ಸರಿ. ಆರೋಪಿತರು ನಮ್ಮ ಜಮೀನಿನ ಕಲ್ಲು ಮತ್ತು ನಾಮಫಲಕವನ್ನು ಹೊಡೆದುಹಾಕಿದ ಕಾರಣ ನನಗೆ ಸುಮಾರು ರೂ. 10,000/-ನಷ್ಟ ಉಂಟಾಗಿರುತ್ತದೆ ಎಂದರೆ ಸರಿ. ಪೋಲೀಸರಿಗೆ ಈ ಬಗ್ಗೆ ಹೇಳಿರುತ್ತೇನೆ ಎಂದರೆ ಸರಿ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಎಂ.ಎಸ್.ಪಿ ವಕೀಲರಿಂದ**

6) ನಾನು ಮೊಗರಹಳ್ಳಿ ಸರ್ವೆ ನಂ.50 ರಲ್ಲಿ 1994-95 ರಲ್ಲಿ ಜಮೀನನ್ನು ಖರೀದಿ ಮಾಡಿರುತ್ತೇನೆ. ಜಮೀನು ಖರೀದಿ ಮಾಡುವ ಪೂರ್ವದಲಿ ಎಲ್ಲಾ ದಾಖಲೆಗಳನ್ನು ಪರಿಶೀಲನೆ ಮಾಡಿದ ನಂತರ ಖರೀದಿ ಮಾಡಿರುತ್ತೇನೆ. ಪೋಲೀಸ್ ಇಲಾಖೆಯವರಲ್ಲೆರೂ ಒಟ್ಟು ಸೇರಿ ಹಣ ಸಂಗ್ರಹಿಸಿ ಜಮೀನನ್ನು ಖರೀದಿ ಮಾಡಿರುತ್ತೇವೆ ಎಂದು ಕ್ರಯಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ. ಈ ರೀತಿ ನಮೂದು ಮಾಡಿರುವ ದಾಖಲೆಯನ್ನು ತನಿಖಾಧಿಕಾರಿಗಳಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಈ ರೀತಿಯಾಗಿ ಪೋಲೀಸ್ ಇಲಾಖೆಯವರಲ್ಲೆರೂ ಒಟ್ಟು ಸೇರಿ ಹಣ ಸಂಗ್ರಹಿಸಿ ಜಮೀನನ್ನು ಖರೀದಿ ಮಾಡಿರುತ್ತೇವೆ ಎನ್ನುವ ಅಂಶ ಯಾವುದೇ ಕ್ರಯಪತ್ರದಲ್ಲಿ ನಮೂದಾಗಿರುವುದಿಲ್ಲ ಎಂದು ಗೊತ್ತಿದ್ದರೂ ಸಹಾ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ರೀತಿ ನಮೂದಾಗಿರುವ ಪತ್ರ 1994 ರ ಪತ್ರದಲ್ಲಿ ಇರುತ್ತದೆ. 2ನೇ ಆರೋಪಿ

ರಾಜಮ್ಮರವರು ಸರ್ವೆ ನಂ.50 ರ ಜಮೀನನ್ನು ಯಾವ ವರ್ಷದಲ್ಲಿ ಯಾರಿಂದ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಹೆಸರಿನಲ್ಲಿ ಖರೀದಿ ಮಾಡಿರುವ ಜಮೀನಿನ ಚಕ್ಕುಬಂದಿ ನನಗೆ ಗೊತ್ತಿದೆ. ಪೂರ್ವಕ್ಕೆ ರಸ್ತೆ ಇದೆ. ಪಶ್ಚಿಮಕ್ಕೆ ರಾಚಯ್ಯರವರ ಸೈಟು, ಉತ್ತರಕ್ಕೆ ರಾಜಮ್ಮರವರ ಜಮೀನು ಇದೆ ಮತ್ತು ದಕ್ಷಿಣಕ್ಕೆ ಇರುವ ಸೈಟು ಯಾರದೆಂದು ನನಗೆ ಗೊತ್ತಿಲ್ಲ.

7) ಮೊಗರಹಳ್ಳಿ ಸರ್ವೆ ನಂ. 50 ರಲ್ಲಿ ಒಟ್ಟು 5 ಎಕರೆ 11 ಗುಂಟೆ ಜಮೀನು ಇದೆ ಎಂದರೆ ಸರಿ. 1990 ರಲ್ಲಿ 2ನೇ ಆರೋಪಿ ರಾಜಮ್ಮ ಸದರಿ ಸರ್ವೆ ನಂಬರಿನಲ್ಲಿ 2 ಎಕರೆ 31 ಗುಂಟೆ ಜಮೀನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಜಮೀನಿನಲ್ಲಿ ಪೋಲೀಸ್ ಇಲಾಖೆಯವರು ಅವರನ್ನು ಸಂಪರ್ಕಿಸಿ ಕ್ರಯಕ್ಕೆ ಕೇಳಿದವರಿಗೆಲ್ಲಾ ಮಾರಾಟ ಮಾಡಿ ಉಳಿದಿರುವ 32 ಗುಂಟೆ ಜಮೀನನ್ನು ಅವರೆ ಉಳಿಸಿಕೊಂಡಿದ್ದರು ಎಂದರೆ ಸರಿ. ಸದರಿ 32 ಗುಂಟೆ ಜಮೀನನ್ನು 2017 ರಲ್ಲಿ ಆರೋಪಿತರು ಅವರ ಹೆಣ್ಣು ಮಕ್ಕಳಿಗೆ ನೊಂದಾಯಿತ ವಿಭಾಗ ಪತ್ರದ ಮೂಲಕ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

8) ಜನವರಿ 13 ರಲ್ಲಿ ಆರೋಪಿತರು ನಮ್ಮ ಜಮೀನಿನಲಿ ಕಲ್ಲು ಕಿತ್ತು ಹಾಕಿರುತ್ತಾರೆ ಎನ್ನುವ ವಿಷಯ ನನಗೆ ಅದೇದಿನ ಗೊತ್ತಾಗಿರುತ್ತದೆ. ಈ ರೀತಿ ಘಟನೆ ನಡೆದಿದೆ ಎನ್ನಲಾದ ನಂತರ ಫೆಬ್ರವರಿ ತಿಂಗಳಿನಲ್ಲಿ ನಾನು ದೂರನ್ನು ನೀಡಿರುತ್ತೇನೆ. ದಿನಾಂಕ ನೆನಪಿಲ್ಲ. ಘಟನೆ ನಟೆದಿದೆ ಎನ್ನುವ ದಿವಸ ಪೋಲೀಸ್ ಠಾಣೆಗೆ ಹೋಗಿ ಮಾಹಿತಿ ನೀಡಿರುತ್ತೇನೆ. ಪೋಲೀಸರು ಈ ಬಗ್ಗೆ ನಾನು ನೀಡಿದ ಮಾಹಿತಿಗೆ ಸ್ವೀಕೃತಿಯನ್ನು ಸಹಾ ನೀಡಿರುತ್ತಾರೆ. ಈ ಬಗ್ಗೆ ನಾನು ತನಿಖಾಧಿಕಾರಿಗಳಿಗೆ ಹೇಳಿ ಸದರಿ ಸ್ವೀಕೃತಿಯನ್ನು ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ದಿಃ13.01.2019 ರಂದು ನಾನು ಯಾವುದೇ ದೂರನ್ನು ಯಾವುದೇ ಪೋಲೀಸ್ ಠಾಣೆಯಲ್ಲಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಸ್ವೀಕೃತಿಯನ್ನು ಪೋಲೀಸರು ನನಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

9) ನಿಪಿ– 2 ದೂರಿನಲ್ಲಿ ಏನು ಬರೆದಿದೆ ಎಂದು ನನಗೆ ಹೇಳಲು ಬರುವುದಿಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ, ನನ್ನ ಗಂಡ ನನಗೆ ಓದಿ ಹೇಳಿರುತ್ತಾರೆ. ನನ್ನ

ಗಂಡ ಘಟನೆ ಬೆಳಿಗ್ಗೆ 11.00 ಗಂಟೆ 11.30 ಮದ್ಯೆ ಆಗಿರುತ್ತದೆ ಎಂದು ಹೇಳಿರುತ್ತಾರೆ. ನನ್ನ ಗಂಡ ಅಲ್ಲದೆ ಬೇರೆ ಯಾರು ನನಗೆ ಈ ಬಗ್ಗೆ ಹೇಳಿರುವುದಿಲ್ಲ. ನಿಪಿ-2 ದೂರಿನ್ನು ಯಾರ ಹೆಸರಿನಲ್ಲಿ ನೀಡಿರುತ್ತೇನೆ ಎಂದು ಗೊತ್ತಿದೆ. ರಾಜಮ್ಮ ಮತ್ತು ಅವರ ಗಂಡನ ಹೆಸರು ಮಾತ್ರ ನನಗೆ ಗೊತ್ತಿದೆ. ಆದರೆ ಅವರ ಹೆಣ್ಣು ಮಕ್ಕಳು ಅಳಿಯಂದರ ಹೆಸರು ನನಗೆ ಗೊತ್ತಿಲ್ಲ. ಅವರ ಹೆಣ್ಣು ಮಕ್ಕಳ ಮತ್ತು ಅಳಿಯಂದಿರ ಹೆಸರನ್ನು ನಾನು ತಿಳಿದುಕೊಳ್ಳುವ ಪ್ರಯತ್ನ ಮಾಡಿರುವುದಿಲ್ಲ.

10) ಘಟನೆ ನಡೆದಿದೆ ಎನ್ನುವ ದಿನಕ್ಕೂ ಪೋಲೀಸರು ಮಹಜರ್ ಮಾಡಲು ಸ್ಥಳಕ್ಕೆ ಬಂದಿರುತ್ತಾರೆ ಎನ್ನುವ ದಿನಕ್ಕು ಸುಮಾರು 18 ದಿನಗಳ ವಿಳಂಬ ಇದೆ ಎಂದರೆ ಸರಿ. ಘಟನೆ ನಡೆದ 16 ದಿನಗಳ ನಂತರ ದೂರನ್ನು ನೀಡಿರುತ್ತೇನೆ ಎಂದರೆ ಸರಿ. ನಾನು ನಿಪಿ-2 ದೂರನ್ನು ನೀಡುವ ಪೂರ್ವದಲ್ಲಿ ನನ್ನ ಗಂಡ ಮತ್ತು ಇತರ ನಿವೃತ್ತ ಪೋಲೀಸ್ ಸಿಬ್ಬಂದಿಗಳ ವಿರುದ್ಧ ರಾಜಮ್ಮ ರವರ ಹೆಣ್ಣು ಮಕ್ಕಳು ಸಿವಿಲ್ ದಾವೆಯನ್ನು ಒ.ಎಸ್.35/2019 ರಂತೆ ದಾಖಲು ಮಾಡಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ಅವರಿಗೆ ಜಮೀನಿಗೆ ತೊಂದರೆ ಕೊಡಬಾರದೆನ್ನುವ ತಡೆಯಾಜ್ಞೆಯನ್ನು ಸಹಾ ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ತಡೆಯಾಜ್ಞೆಯ ಆದೇಶದ ಮಾಹಿತಿ ಬಂದ ಮೇರೆಗೆ ನನ್ನ ಗಂಡ ಮತ್ತು ಇತರೆ ನಿವೃತ್ತ ಪೋಲೀಸ್ ಅಧಿಕಾರಿಗಳು ಸೇರಿ ಆರೋಪಿತರ ವಿರುದ್ಧ ಈ ಪ್ರಕರಣದ ದೂರನ್ನು ಮತ್ತು ಇತರ ಮೂರು ದೂರನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

11) ಸರ್ವೆ ನಂ.50 ರ 5 ಎಕರೆ11 ಗುಂಟೆ ಖಾಲಿ ಜಮೀನು ಎಂದರೆ ಸರಿ. ನಮ್ಮ ಜಮೀನಿನಲ್ಲಿ ಗಡಿ ಕಲ್ಲು ಗುರುತಿಸಿ ಬೋರ್ಡ್ ಹಾಕಲು ಸಕ್ಷಮ ಪ್ರಾಧಿಕಾರದಿಂದ ಅನುಮತಿಯನ್ನು ನನ್ನ ಗಂಡ ಪಡೆದುಕೊಂಡಿರುತ್ತಾರೆ. ಗಡಿ ಕಲ್ಲುಗಳು ಮತ್ತು ಬೋರ್ಡನ್ನು ಯಾರಿಂದ ಯಾವತ್ತು ಖರೀದಿ ಮಾಡಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಖರೀದಿಯ ಬಗ್ಗೆ ಇರುವ ರಶೀದಿ ನನ್ನ ಗಂಡನ ಬಳಿ ಇದೆ. ನನ್ನ ಗಂಡ ನಿವೃತ್ತಿ ಆಗುವ ಪೂರ್ವದಲ್ಲಿ ಪೋಲೀಸ್ ಇಲಾಖೆಯಲ್ಲಿ ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದರು. ದಿಃ13.01.2019 ರಂದು ನಮ್ಮ ಜಮೀನಿನ ಬಳಿ ನಾನು ಹೋಗಿರುತ್ತೇನೆ. ಆ ಸಮಯ ಯಾರು ಇರಲಿಲ್ಲ. ನಾಗರಾಜು ಎನ್ನುವವರು ನಂತರ ಸ್ಥಳಕ್ಕೆ ಬಂದು ನನಗೆ

ವಿಚಾರ ತಿಳಿಸಿದರು. ಅವರು ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ವಿಚಾರವನ್ನು ದೂರಿನಲ್ಲಿ ನಮೂದಿಸಿರುವುದಿಲ್ಲ.

12) ಸರ್ವೆ ನಂ.50 ರಲ್ಲಿ ರಲ್ಲಿ ರಸೆತ ಮತ್ತು ಚರಂಡಿಗಳನ್ನು ನನ್ನ ಗಂಡ ಮತ್ತು ಉಳಿದ ಪೋಲೀಸ್ ಸಿಬ್ಬಂದಿಗಳು ಸೇರಿ ಮಾಡಿಸಿರುತ್ತಾರೆ. ಈ ರೀತಿ ರಸ್ತೆ ಮತ್ತು ಚರಂಡಿ ನಿರ್ಮಿಸಲು ಸಕ್ಷಮ ಪ್ರಾದಿಕಾರದಿಂದ ಅನುಮತಿ ಪಡೆದಿರುತ್ತಾರೆ. ನಿಪಿ- 7 ಮತ್ತು 8 ಪೋಟೋಗಳಲ್ಲಿ ಕಾಣಿಸುವ ರಸ್ತೆ ಮತ್ತು ಚರಂಡಿ ಸದರಿ ಪೋಟೋ ತೆಗೆಸುವ ಎರಡು ಮೂರು ತಿಂಗಳ ಹಿಂದೆ ನಿರ್ಮಾಣ ಆಗಿರುತ್ತದೆ. ಈ ರೀತಿ ರಸ್ತೆ ಮತ್ತು ಚರಂಡಿ ನಿರ್ಮಾಣ ಮಾಡಿದ ಕಾರಣ ಆರೋಪಿತರ ಹೆಣ್ಣು ಮಕ್ಕಳು ರೆವೆನ್ಯೂ ಇಲಾಖೆ ಮತ್ತು ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

13) ನಿಪಿ-6 ಮಹಜರಿನಲ್ಲಿ ಪೋಲೀಸರು ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಮಹಜರಿಗೆ ನನ್ನ ಗಂಡ ಸಹಿ ಮಾಡಿರುದಿಲ್ಲ. ನಿಪಿ-6 ಮಹಜರ್ ಕಾಲದಲ್ಲಿ ನನ್ನ ಗಂಡ ಇರಲ್ಲಿಲ್ಲ ಎಂದರೆ ಸರಿಯಲ್ಲ. ನಿಪಿ-6 ಮಹಜರಿನಲ್ಲಿ ಸಹಿಯನ್ನು ನಾನು ಪೋಲೀಸ್ ಠಾಣೆಯಲ್ಲಿ ಹಾಕಿರುತ್ತೇನೆ. ಎಂಒ-1 ವಸ್ತು ಕಟ್ಟಡ ಕಾಮಗಾರಿ ನಡೆಯುವ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿ. ಎಂಒಾ1ನ್ನು ಪೋಲೀಸರು ಎಲ್ಲಿಂದ ವಶಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದರಲ್ಲಿ ನನ್ನ ಸಹಿಯಾಗಲೀ ಸಾಕ್ಷಿದಾರರ ಸಹಿಯಾಗಲೀ ಇರುವುದಿಲ್ಲ. ನಾನು ಖರೀದಿ ಮಾಡಿರುವ ಜಮೀನಿಗೆ ಕಂದಾಯ ಮಾಡಿಸಿರುವ ವರ್ಷ ನನಗೆ ನೆನಪಿಲ್ಲ. 1995 ರಲ್ಲಿ ಖರೀದಿ ಮಾಡಿದ ನಂತರ 2016-17 ರಲ್ಲಿ ಆರ್.ಟಿ.ಸಿ ಮಾಡಿಸಿರುತ್ತೇನೆ ಎಂದರೆ ಸರಿ. ಇಷ್ಟು ದಿನಗಳ ಕಾಲ ಕಂದಾಯ ದಾಖಲೆ ಮಾಡಿಸದೆ ಇರಲು ಕಾರಣವನ್ನು ತನಿಖಾಧಿಕಾರಿಗಳಿಗೆ ಹೇಳಿರುವುದಿಲ್ಲ.

14) ಈ ಪ್ರಕರಣದ ಬಗ್ಗೆ ಪೋಲೀಸರಿಗೆ ಮಾಹಿತಿ ನೀಡಿರುವುದು ನನ್ನ ಗಂಡ. ನನ್ನ ಗಂಡ ಹೇಳಿಕೊಟ್ಟಂತೆ ನಾನು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಜಮೀನು ಖರೀದಿ ಮಾಡಿರುವ ಸ್ಥಳಕ್ಕೂ ಈ ಪ್ರಕರಣದಲ್ಲಿ ನಾನು ತನಿಖಾಧಿಕಾರಿಗಳಿಗೆ ತೋರಿಸಿದ ಸ್ಥಳಕ್ಕೂ ತಾಳೆಯಾಗುವುದಿಲ್ಲ ಎಂದು ಬೂ ಮಾಪಕರು ವರದಿ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡದವರಿಗೆ ಸೇರಿದ ಜನಾಂಗಕ್ಕೆ ಸೇರಿದ್ದಾಗಿರುತ್ತದೆ ಯಾವುದೇ

ನಾಮಫಲಕ ಹಾಕಿರುವುದಿಲ್ಲ ಎಂದರೆ ಸರಿ. ನಾನು ದಿಃ13.01.2019 ರಂದು ಯಾವುದೇ ಸ್ಥಳಕ್ಕೆ ಹೋಗಿರವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ಚಿತಾವಣೆ ಮೇರೆಗೆ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1994 ರಿಂದ ಈ ಘಟನೆ ನಡೆದಿದೆ ಎನ್ನುವ ದಿನದವರೆಗೂ ಆರೋಪಿತರಾಗಲೀ ಅವರ ಕುಟುಂಬದವರಾಗಲೀ ನಮ್ಮ ಜಮೀನಿಗೆ ಯಾವುದೆ ತಂಟೆತಕರಾರಿಗೆ ಬಂದಿರುವುದಿಲ್ಲ. ಆರೋಪಿತರ ಮಕ್ಕಳು ಸಿವಿಲ್ ದಾವೆ ಹಾಕಿ ತಡೆಯಾಜ್ಞೆ ಪಡೆದಿರುವ ಕಾರಣ ಆರೋಪಿತರ ವಿರುದ್ಧ ಸುಳ್ಳು ದೂರನ್ನು ನನ್ನ ಗಂಡನ ಚಿತಾವಣೆ ಮೇರೆಗೆ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

15) ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**

5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ

ನ್ಯಾಯಾಲಯ, ಮಂಡ್ಯ